

# ಐರಾ ಖಾನ್ ಪ್ರಶ್ನೋತ್ತರ

ಅಮೀರ್ ಖಾನ್ ಮಗಳು ಐರಾ ಖಾನ್ ಮತ್ತೆ ಸುದ್ದಿಯಲ್ಲಿದ್ದಾಳೆ. ಅಮೀರ್ ಖಾನ್ ಮತ್ತು ಆತನ ವಿಚ್ಛೇದಿತ ಪತ್ನಿ ರೀನಾ ದತ್ತಾ ಮಗಳಾದ ಐರಾ, ಇತ್ತೀಚೆಗೆ ನಾಟಕವೊಂದನ್ನು ನಿರ್ದೇಶಿಸಿ ಸುದ್ದಿ ಮಾಡಿದ್ದಳು. ಯೂರಿಪಿಡೀಸ್ ಮಿಡಿಯಾದ ಈ ನಾಟಕ ರೂಪಾಂತರದಲ್ಲಿ ಹಜೆಲ್ ಕೀಚ್ ಪ್ರಮುಖ ಪಾತ್ರ ವಹಿಸಿದ್ದು ಗಮನ ಸೆಳೆದಿತ್ತು.

ಐರಾಳ ಹೊಸ ಸುದ್ದಿ ಇನ್‌ಸ್ಟಾಗ್ರಾಮ್‌ನದ್ದು. ಇನ್‌ಸ್ಟಾಗ್ರಾಮ್‌ನಲ್ಲಿ ಅಭಿಮಾನಿಗಳ ಜೊತೆಗೆ ಪ್ರಶ್ನೋತ್ತರ ನಡೆಸಿದ ಐರಾ, 'ಕ್ವಾರಂಟೈನ್ ಅವಧಿಯಲ್ಲಿ ನೀನು ಏನು ಮಾಡುತ್ತಿದ್ದೀಯಾ?' ಎಂದು ಅಭಿಮಾನಿಯೊಬ್ಬನಿಗೆ ಪ್ರಶ್ನಿಸಿದ್ದಾಳೆ. ಅದಕ್ಕೆ ಆತ 'ಸಾನ್ಯಾ ಮಲ್ಹೋತ್ರಾ ಜೊತೆ ಡೇಟಿಂಗ್ ಮಾಡೋಣ ಎಂದುಕೊಂಡಿದ್ದೇನೆ' ಎಂದು ಉತ್ತರಿಸಿದ್ದಾನೆ. ತಕ್ಷಣ ಐರಾ, 'ಎಲ್ಲಿದ್ದಾಳೆ ಆಕೆ? ಕರೆದುಕೊಂಡು ಬನ್ನಿ. ಆದರೆ ನಾನು ಮೊದಲು..' ಎಂದು ತುಂಟ ಉತ್ತರ ನೀಡಿದ್ದಾಳೆ.

ಸಾನ್ಯಾ ಮಲ್ಹೋತ್ರಾ 2016ರ ಸೂಪರ್‌ಹಿಟ್ ಚಿತ್ರ 'ದಂಗಲ್'ನಲ್ಲಿ ಅಮೀರ್‌ಖಾನ್ ಮಗಳಾಗಿ ನಟಿಸಿದಾಕೆ. ಕುಸ್ತಿಪಟು ಪಾತ್ರದಲ್ಲಿ ಮಿಂಚಿದ ಆಕೆಯನ್ನು ಬಳಿಕ ಬಾಲಿವುಡ್ ಅಷ್ಟಾಗಿ ಹಚ್ಚಿಕೊಂಡಿರಲಿಲ್ಲ. ಆದರೆ ದಂಗಲ್‌ನಲ್ಲಿ ಆಕೆಯ ನಟನೆಗೆ ಫುಲ್ ಮಾರ್ಕ್ಸ್ ಸಿಕ್ಕಿತ್ತು. ಐರಾಗೆ ಆಕೆಯೆಂದರೆ ತುಂಬ ಇಷ್ಟವಂತೆ. ■



# ದೀಪಿಕಾ ನಿರಾಶೆ

21 ದಿನಗಳ ಕೊರೊನಾ ಕರ್ಫ್ಯೂ ವೇಳೆ ತಾರೆಯರು ಮನೆಯಲ್ಲಿ ಕುಳಿತು ಏನೇನು ಮಾಡುತ್ತಿದ್ದಾರೆಂಬ ಬಗ್ಗೆ ಹತ್ತಾರು ವಿಡಿಯೊಗಳು ಹರಿದಾಡುತ್ತಿವೆ. ಅವುಗಳಲ್ಲಿ ಒಂದು ಪಾತ್ರೆ ತೊಳೆಯೋದು. ಕೆಲವು ದಿನಗಳ ಹಿಂದೆ ಅಡುಗೆ ಮನೆಯಲ್ಲಿ ಪಾತ್ರೆ ತೊಳೆಯುವ ತನ್ನ ವಿಡಿಯೊವನ್ನು ಇನ್‌ಸ್ಟಾಗ್ರಾಮ್‌ನಲ್ಲಿ ಹಾಕಿದ್ದ ನಟಿ ಕತ್ರಿನಾ ಕೈಫ್, 'ಪಾತ್ರೆ ತೊಳೆಯುವಾಗ ನೀರು ಉಳಿಸುವುದನ್ನೂ ಮರೆಯಬೇಡಿ' ಎಂದು ಹಿತೋಪದೇಶ ನೀಡಿದ್ದಳು. ಈಗ ದೀಪಿಕಾ ಪಡುಕೋಣೆ ತನ್ನ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಕತ್ರಿನಾ ಪಾತ್ರೆ ತೊಳೆಯುವ ಅದೇ ವಿಡಿಯೊವನ್ನು ಹಾಕಿದ್ದಾಳೆ. ಜೊತೆಗೆ ಅದರ ಕೆಳಗೊಂದು ಟಿಪ್ಪಣಿ ಕೂಡಾ ಬರೆದಿದ್ದಾಳೆ. 'ಸೀಸನ್ 1 ಎಪಿಸೋಡ್ 5 ಕ್ಯಾನ್ಸಲ್ ಆಗಿದೆ. ಏಕೆಂದರೆ ಕತ್ರಿನಾ ಕೈಫ್ ನನ್ನ ಐಡಿಯಾವನ್ನು ಕದ್ದಿದ್ದಾಳೆ!' ಎನ್ನುತ್ತಿದೆ ಈ ಟಿಪ್ಪಣಿ. ದೀಪಿಕಾಳ ಈ ಟಿಪ್ಪಣಿ ಹೊಗಳಿಕೆಯೋ, ಕಾಲೆಳೆಯುವುದೋ ಎಂದು ಗೊತ್ತಾಗದೆ ಕತ್ರಿನಾ ಕನ್‌ಫ್ಯೂಸ್ ಆಗಿದ್ದಾಳಂತೆ!

■ ಹನಿ